ಭದ್ರಾವತಿ ಉಪ ಸಂರಕ್ಷಣಾ ವ್ಯಾಪ್ತಿಯ ಅರಣ್ಯಗಳಲ್ಲಿ ಕಳ್ಳಸಾಗಾಣಿಕೆ

3140 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾವತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ವ್ಯಾಪ್ತಿಯಲ್ಲಿ 99-2000 ಮತ್ತು 2000-01ನೇ ಸಾಲಿನಲ್ಲಿ ದಾಖಲಾದ ಕಳ್ಳಸಾಗಾಣಿಕೆ ಪ್ರಕರಣಗಳು ಎಷ್ಟು?*

ಆ) *ಅಂತಹ ಪ್ರಕರಣಗಳು ಯಾವುವು ಹಾಗೂ ಈ ಸಂಬಂಧ ಎಷ್ಟು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ?*

ಇ) *ಈ ಪ್ರಕರಣಗಳಿಂದ ಎಷ್ಟು ಮರಗಳನ್ನು ಮುಟ್ಟುಗೋಲು ಹಾಕಲಾಗಿದೆ. ಇದರ ಸಂಖ್ಯೆ ಮತ್ತು ಪೂರ್ಣ ವಿವರಗಳನ್ನು ತಿಳಿಸುವುದು?*

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 1999-2000 2000-01ನೇ ಸೆಪ್ಟೆಂಬರ್ ವರೆಗೆ

1531 743 ಪ್ರಕರಣಗಳು

ಆ) ಶ್ರೀಗಂಧ ಬೀಟೆ ಹಾಗೂ ಇತರೇ ಅರಣ್ಯ ಉತ್ಪನ್ನಗಳ ಪ್ರಕರಣಗಳು.

99 ವಾಹನಗಳು 67 ವಾಹನಗಳು

ಇ)

ಬೀಟೆ	84.738 ಘಮೀ.	51.018 ಘಮೀ
ಸಾಗುವಾನಿ	97.053 ಘಮೀ	50.182 ಘಮೀ
ಇತರೆ ಜಾತಿ	154.418 ಘಮೀ	51.156 ಘಮೀ
ಸೌದೆ	185.829 ಟನ್	66.571 ಟನ್
ಶ್ರೀಗಂಧ	1.125 ಟನ್	1.026 ಟನ್

ರಾಜ್ಯದಲ್ಲಿ ಪರಿಸರ ಮಾಲಿನ್ಯದ ಬಗ್ಗೆ

3141 - ಶ್ರೀ ಜೆ.ಟಿ. ಪಾಟೀಲ್ (ಬಿಳಗಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ದಿನದಿಂದ ದಿನಕ್ಕೆ ಪರಿಸರ ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಅ) ರಾಜ್ಯದಲ್ಲಿ ಯಾವ ಮೂಲದಿಂದ ಪರಿಸರ ಹೆಚ್ಚು ಮಾಲಿನ್ಯವಾಗಿದೆ? ಹಾಗೂ ಈಗಾಗಲೇ ಎಲ್ಲೆಲ್ಲಿ ಪರಿಸರ ಮಾಲಿನ್ಯವಾಗಿದೆ? ಮಾಹಿತಿ ಒದಗಿಸುವುದು?

ಆ) ಪರಿಸರ ಮಾಲಿನ್ಯವಾಗದಂತೆ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ತಿಳಿಸಲಾಗುವುದೇ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು) :

ಅ) ಬಂದಿದೆ.

ಆ) ರಾಜ್ಯದಲ್ಲಿ ಪ್ರಮುಖವಾಗಿ ಮಾಲಿನ್ಯವಾಗುತ್ತಿರುವುದು ಉದ್ದಿಮೆಗಳಿಂದ, ಪುರಸಭೆ, ಪಟ್ಟಣ, ನಗರ ಹಾಗೂ ವಾಹನಗಳಿಂದ

ಇವುಗಳಲ್ಲಿ ಮುಖ್ಯವಾದುವೆಂದರೆ :

1. ರಾಜ್ಯದಲ್ಲಿ ಭದ್ರಾವತಿಯಲ್ಲಿರುವ ಕಾಗದ ಕಾರ್ಖಾನೆ ಮತ್ತು ಭದ್ರಾವತಿ ನಗರದಿಂದ ಭದ್ರಾ ನದಿಯ ನೀರಿನ ಮೇಲೆ ಮಾಲಿನ್ಯದ ದುಷ್ಪರಿಣಾಮಗಳು ಆಗಿದೆ. ಕಾಗದ ಕಾರ್ಖಾನೆಯು ಈಗಿರುವ ತನ್ನ ಮಾಲಿನ್ಯ ನಿಯಂತ್ರಣ ಘಟಕವನ್ನು ಉನ್ನತೀಗೊಳಿಸಿದ್ದು, ಇದನ್ನು ಒಂದೆರಡು ತಿಂಗಳಲ್ಲಿ ಚಾಲನೆ ಮಾಡಲಿದ್ದಾರೆ. ಭದ್ರಾವತಿ ನಗರದಿಂದ ಉತ್ಪತ್ತಿಯಾಗುವ ಮಲಿನ ನೀರನ್ನು ಶುದ್ಧೀಕರಿಸುವುದು ನಗರ ಸಭೆಯ ಜವಾಬ್ದಾರಿಯಾಗಿದ್ದು ಸದರಿ ವಿಷಯದಲ್ಲಿ ನಗರಸಭೆಯು ಇನ್ನೂ ಕ್ರಮ ಜರುಗಿಸಬೇಕಾಗಿದೆ. ರಾಷ್ಟ್ರೀಯ ನದಿ ಕ್ರಿಯಾ ಯೋಜನೆಯಡಿ ಭದ್ರಾವತಿ ನಗರದಲ್ಲಿ 800 ವೈಯಕ್ತಿಕ ಶೌಚಾಲಯ ಹಾಗೂ 12 ಸಾಮೂಹಿಕ ಶೌಚಾಲಯಗಳನ್ನು ರೂ. 112 ಲಕ್ಷ ವೆಚ್ಚದಲ್ಲಿ ಈಗಾಗಲೇ ನಿರ್ಮಾಣ ಮಾಡಲಾಗಿದೆ.

2. ಬೀದರ್ ಜಿಲ್ಲೆಯ ಕೊಲ್ಹಾರ ಕೈಗಾರಿಕಾ ಪ್ರದೇಶದಲ್ಲಿ 47 ರಸಾಯನಿಕ ಉದ್ದಿಮೆಗಳಿದ್ದು ಇವುಗಳಿಂದ ಜಲಮಾಲಿನ್ಯವಾಗಿದ್ದು, ಮಂಡಳಿಯು ಕೆಲವು ಪ್ರಮುಖ ಉದ್ದಿಮೆಗಳಿಗೆ ಮುಚ್ಚುವ ಆಜ್ಞೆಯನ್ನು ನೀಡಿದೆ. ಸದರಿ ವಿಷಯದಲ್ಲಿ ಒಂದು ಸಂಯುಕ್ತ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಇದಕ್ಕೆ ಬೇಕಾದ ಜಮೀನನ್ನು ಸಹ ನೀಡಿದೆ. ಕೆಲವು ಪ್ರಮುಖ ಕಾರಣಗಳಿಂದ ಹಾಗೂ ಅನೇಕ ಉದ್ದಿಮೆಗಳು ಮುಚ್ಚಿರುವುದರಿಂದ ಈ ಕೆಲಸವು ಇನ್ನು ಕಾರ್ಯಗತವಾಗಿಲ್ಲ.

3. ಹಿರಿಯೂರು ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿರುವ ಮೆ: ಬಿ.ಟಿ.ಎಫ್.ಸಿ. ಉದ್ದಿಮೆಯಿಂದ ಈ ಹಿಂದೆ ಜಲ ಮಾಲಿನ್ಯವಾಗಿದ್ದು ಬೆಳೆನಾಶಕ್ಕೆ ಕಾರಣವಾಗಿರುತ್ತದೆ. ಈ ಉದ್ದಿಮೆಯು ಈಗ ಮಲಿನ ನೀರನ್ನು ಶುದ್ಧೀಕರಿಸುವ ಘಟಕವನ್ನು ಹೊಂದಿದೆ.

4. ಮಂಗಳೂರಿನಲ್ಲಿ ಸ್ಥಾಪನೆಯಾಗಿರುವ ಮೆ: ಮಂಗಳೂರು ರಿಫೈನರಿ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಉದ್ದಿಮೆಯಿಂದ ತೈಲ ಶುದ್ಧೀಕರಣ ಘಟಕದಿಂದ ಮಳೆ ನೀರಿನ ಜೊತೆಯಲ್ಲಿ ಉದ್ದಿಮೆಯ

ಮಲಿನ ನೀರು ಸೇರಿ ಅಕ್ಕಪಕ್ಕದ ಜಮೀನುಗಳಲ್ಲಿ ಬೆಳೆ ನಾಶವನ್ನು ಉಂಟುಮಾಡಿದ್ದರಿಂದ ರೂ. 4.99 ಲಕ್ಷ ರೂಪಾಯಿ ಪರಿಹಾರವನ್ನು ನೀಡಿದೆ. ಈಗ ಈ ಉದ್ದಿಮೆಯು ಮಳೆ ನೀರು ಹರಿದು ಹೋಗಲು ಚರಂಡಿ ವ್ಯವಸ್ಥೆಯನ್ನು ಮಾಡಿರುವುದರಿಂದ ಇಂತಹ ಮಾಲಿನ್ಯವನ್ನು ತಡೆಯಲಾಗಿದೆ.

5. ಹೊಸಪೇಟೆ ಹತ್ತಿರ ಸ್ಥಾಪನೆಯಾಗಿರುವ ಮೆ: ಇಂಡಿಯಾ ಶುಗರ್ಸ್ ಮತ್ತು ರಿಫೈನರೀಸ್ ಉದ್ದಿಮೆಯಿಂದ ಆಕಸ್ಮಿಕವಾಗಿ ಮೊಲಾಸಿಸ್ ಹರಿದು ತುಂಗಭದ್ರಾ ನದಿಗೆ ಸೇರಿದ್ದರಿಂದ ಮೀನುಗಳು ಸತ್ತಿದ್ದು, ಸದರಿ ವಿಷಯದಲ್ಲಿ ಮೀನುಗಾರರಿಗೆ ರೂ. 55.97 ಲಕ್ಷ ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಿದೆ. ಈಗ ಉದ್ದಿಮೆಯು ಸೂಕ್ತ ನಿಯಂತ್ರಣ ಕ್ರಮಗಳನ್ನು ಅಳವಡಿಸಿರುವುದರಿಂದ ಸಮಸ್ಯೆಯು ಬಗೆಹರಿದಿದೆ.

6. ರಾಣೆಬೆನ್ನೂರು ತಾಲ್ಲೂಕಿನಲ್ಲಿ ಸ್ಥಾಪನೆಯಾಗಿರುವ ಮೆ: ಹರಿಹರ ಪಾಲಿಫೈಬರ್ ಹಾಗೂ ಮೆ: ಗ್ರಾಸಿಮ್ ಉದ್ದಿಮೆಗಳಿಂದ ಹೊರಬಿಡುವ ಮಲಿನ ನೀರಿನಿಂದ ತುಂಗಭದ್ರಾ ನದಿಯಲ್ಲಿ ಮೀನುಗಳು ಸತ್ತಿದ್ದರಿಂದ ರೂ. 2500 ರಂತೆ ಒಟ್ಟು 47 ಮೀನುಗಾರರಿಗೆ ಪರಿಹಾರ ಧನವನ್ನು ನೀಡುವುದಾಗಿ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಿದೆ. ಸದರಿ ವಿಷಯದಲ್ಲಿ ಉದ್ದಿಮೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಹೆಚ್ಚುವರಿ ನಿಯಂತ್ರಣ ಘಟಕಗಳನ್ನು ಅಳವಡಿಸಿರುವುದರಿಂದ ಮತ್ತೆ ಮೀನುಗಳು ಸತ್ತಿರುವುದಿಲ್ಲ.

7. ನಂಜನಗೂಡಿನಲ್ಲಿ ಸ್ಥಾಪನೆಯಾಗಿರುವ ಮೆ: ಜೆಮಿನಿ ಡಿಸ್ಟಿಲರಿಯು ಈ ಹಿಂದೆ ಜಲ ಮಾಲಿನ್ಯವನ್ನು ಉಂಟುಮಾಡಿ ಬೆಳೆ ನಾಶವಾಗಿತ್ತು. ಈ ಸಂಬಂಧ ರೈತಾಪಿ ಜನರು ಪರಿಹಾರ ಧನ ನೀಡುವಂತೆ ಕೇಳಿದ್ದರು. ಈ ವಿಷಯವು ಜಿಲ್ಲಾಧಿಕಾರಿಯವರ ಮಟ್ಟದಲ್ಲಿ ತೀರ್ಮಾನವಾಗಬೇಕಿದೆ. ಈಗ ಈ ಉದ್ದಿಮೆಯು ಮಲಿನ ನೀರಿನಿಂದ ಕಾಂಪೋಸ್ಟ್ ವಿಧಾನದಲ್ಲಿ ಗೊಬ್ಬರವನ್ನು ತಯಾರು ಮಾಡುವುದರಿಂದ ಸದರಿ ಸಮಸ್ಯೆಯು ಇರುವುದಿಲ್ಲ. ಅಲ್ಲದೆ, ಕಾರ್ಖಾನೆಯ ಸುತ್ತಮುತ್ತಲಿನ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುತ್ತದೆ.

8. ಬೆಂಗಳೂರು ನಗರದಲ್ಲಿ ಪ್ರಮುಖವಾಗಿ ವಾಹನಗಳಿಂದ ಮಾಲಿನ್ಯವಾಗುತ್ತಿದ್ದು ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹಲವಾರು ರೀತಿಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ಈಗಾಗಲೇ ಮಾಡಿರುವುದಲ್ಲದೆ, ಸಾರಿಗೆ ಮತ್ತು ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ಐದು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ನಗರಕ್ಕೆ ಬರುವ ವಾಹನಗಳನ್ನು ಪರೀಕ್ಷೆ ಮಾಡಿ ಸೂಕ್ತ ಕ್ರಮ ಜರುಗಿಸುತ್ತಿದೆ. ಬೆಂಗಳೂರು ನಗರವಲ್ಲದ ಉಳಿದ ಜಿಲ್ಲೆಗಳಲ್ಲಿ ವಾಹನಗಳ ಮಾಲಿನ್ಯವನ್ನು ತಡೆಗಟ್ಟಲು ಸಂಬಂಧಪಟ್ಟ ಸಾರಿಗೆ ಇಲಾಖೆ ವಾಹನಗಳನ್ನು ಪರೀಕ್ಷೆ ಮಾಡಲು ತಿಳಿಸಲಾಗಿದೆ. ಅಲ್ಲದೆ, ಬೆಂಗಳೂರಿನಲ್ಲಿ ಉಂಟಾಗುವ ಜಲ ಮಾಲಿನ್ಯವನ್ನು ನಿಯಂತ್ರಣ ಮಾಡಲು ಬೆಂಗಳೂರು ನೀರು ಸರಬರಾಜು ಮಂಡಳಿಯು ಮೂರು ಸ್ಥಳಗಳಲ್ಲಿ ನಿಯಂತ್ರಣ ಘಟಕಗಳನ್ನು ಸ್ಥಾಪಿಸಿದೆ. ಇವುಗಳು ಸರಿಯಾಗಿ ಕಾರ್ಯ

ನಿರ್ವಹಿಸದೆ ಇರುವುದರಿಂದ ಹಾಗೂ ಮಲಿನ ನೀರು ಸಂಪೂರ್ಣವಾಗಿ ಒಳ ಚರಂಡಿಗೆ ಸೇರದೆ ತೆರದ ಚರಂಡಿಗಳಲ್ಲಿ ಹರಿದು ಸಂಪೂರ್ಣವಾಗಿ ಒಳ ಚರಂಡಿಗೆ ಸೇರದೆ ತೆರೆದ ಚರಂಡಿಗಳಲ್ಲಿ ಹರಿದು ಹೋಗುವುದರಿಂದ ಜಲ ಮಾಲಿನ್ಯವಾಗುತ್ತಿದೆ. ಸದರಿ ವಿಷಯದಲ್ಲಿ ಈ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈಗಾಗಲೇ ಸಂಪೂರ್ಣ ಅಧ್ಯಯನ ಮಾಡಿ ಬೆಂಗಳೂರು ನೀರು ಸರಬರಾಜು ಮಂಡಳಿಗೆ ವಿವರಗಳನ್ನು ಒದಗಿಸುವದಲ್ಲದೆ, ನಿರ್ದೇಶನಗಳನ್ನು ಕೂಡ ನೀಡಿದೆ.

ಬೆಂಗಳೂರಲ್ಲದೆ ಇತರೆ ನಗರ ಪ್ರದೇಶಗಳಲ್ಲಿ ಗ್ರಾಮಸಾರಗಳಿಂದ ಜಲ ಮಾಲಿನ್ಯ ಉಂಟಾಗುತ್ತಿದೆ. ಏಕೆಂದರೆ ಇಲ್ಲಿ ಸುವ್ಯವಸ್ಥಿತವಾದ ಒಳಚರಂಡಿ ವ್ಯವಸ್ಥೆ ಹಾಗೂ ಕಲುಷಿತ ನೀರಿನ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿಲ್ಲ. ಈ ಬಗ್ಗೆ ಎಲ್ಲಾ ನಗರ, ಪಟ್ಟಣಗಳ, ಸ್ಥಳೀಯ ಸಂಸ್ಥೆಗಳಿಗೆ ನಿರ್ದಿಷ್ಟ ಸೂಚನೆಗಳನ್ನು ಕೊಟ್ಟು ಮಾಲಿನ್ಯ ನಿಯಂತ್ರಣ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ನಿರ್ದೇಶಿಸಲಾಗಿದೆ.

೫) ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಿರಾಕ್ಷೇಪಣಾ ಪತ್ರವನ್ನು ಹೊಸ ಉದ್ದಿಮೆಗಳಿಗೆ ನೀಡುವುದು ಕಡ್ಡಾಯ ಮಾಡಿದೆ. ಈ ಪತ್ರ ನೀಡುವಾಗ ಜಲ, ವಾಯು, ತ್ಯಾಜ್ಯ ಘನ ವಸ್ತುಗಳ ನಿಯಂತ್ರಣ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಸದರಿ ಮಾಲಿನ್ಯಕಾರಕಗಳ ನಿಯಂತ್ರಣಕ್ಕೆ ತಕ್ಕಂತೆ ಯಂತ್ರೋಪಕರಣಗಳನ್ನು ಅಳವಡಿಸಲು ನಿಬಂಧನೆಗಳನ್ನು ವಿಧಿಸಿ ಈ ನಿಬಂಧನೆಗಳು ಸಂಪೂರ್ಣವಾಗಿ ಪಾಲಿಸಿದ ಮೇಲೆ ಕಾರ್ಯಾರಂಭಕ್ಕೆ ಅನುಮತಿ ನೀಡಲಾಗುತ್ತಿದೆ.

ಕಾರ್ಯ ನಿರ್ವಹಿಸುತ್ತಿರುವ ಉದ್ದಿಮೆಗಳು ಸ್ಥಾಪನೆ ಮಾಡಿರುವ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆ ಮಾಡಿ, ಮಾದರಿ ಸಂಗ್ರಹಣೆ ಮಾಡುತ್ತಿದೆ. ಉಲ್ಲಂಘನೆ ಕಂಡು ಬಂದಲ್ಲಿ ಕಾರಣ ಕೇಳುವ ನೋಟೀಸ್, ಮುಚ್ಚುವ ಆಜ್ಞೆ, ಮೊಕದ್ದಮೆ ಹೂಡುವ ಕ್ರಮಗಳನ್ನು ಜರುಗಿಸುತ್ತದೆ.

ಸದರಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜರುಗಿಸಲು ಅತ್ಯಾಧುನಿಕ ಪ್ರಯೋಗಶಾಲೆಗಳನ್ನು ಬೆಂಗಳೂರಿನಲ್ಲಿ ಅಲ್ಲದೆ ಮೂರು ವಿಭಾಗೀಯ ಮತ್ತು ನಾಲ್ಕು ಪ್ರಾದೇಶಿಕ ಪ್ರಯೋಗಶಾಲೆಗಳನ್ನು ಸ್ಥಾಪಿಸದೆ ಹಾಗೂ ವಿಭಾಗೀಯ ಹಾಗೂ ಪ್ರಾದೇಶಿಕ ಕಛೇರಿಗಳಿಗೆ ಮಾಪನ ಮಾಡಲು ಬೇಕಾಗಿರುವ ಯಂತ್ರೋಪಕರಣಗಳನ್ನು ಹಾಗೂ ವಾಹನಗಳನ್ನು ಒದಗಿಸಿದೆ.

ಮೇಲೆ ವಿವರಿಸಿದ ಕ್ರಮಗಳಲ್ಲದೆ, ಉದ್ದಿಮೆಗಳ ಹಾಗೂ ಇನ್ನಿತರ ಸಂಸ್ಥೆಗಳ ಜೊತೆ ಚರ್ಚೆ ಮಾಡಿ ಪರಿಶುದ್ಧ ತಾಂತ್ರಿಕತೆ ಮರುಬಳಕೆ / ಮರು ಉಪಯೋಗ, ಶುದ್ಧ ಕಚ್ಚಾವಸ್ತುಗಳ ಬಳಕೆಯನ್ನು ಅಳವಡಿಸಿಕೊಳ್ಳಲು ತಿಳುವಳಿಕೆ ನೀಡಲಾಗುತ್ತಿದೆ. ಸಾರ್ವಜನಿಕರಿಗೆ ಹಾಗೂ ಸ್ಥಳೀಯ ಮತ್ತು ಉದ್ದಿಮೆಯ ಪ್ರತಿನಿಧಿಗಳಿಗೆ ತಿಳುವಳಿಕೆ ನೀಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೊಂದಿದಂತೆ ಪರಿಸರ ತರಬೇತಿ ಸಂಸ್ಥೆಯನ್ನು ಕೂಡ ಸ್ಥಾಪಿಸಲಾಗಿದೆ.